Just behind our home started the area mostly the farmer communities lived. One could not miss the slow and sweet drawl of the songs accompanying the grinding of Ragi sung by a single lady or two ladies together. And there were seasonal songs too like the 'Kontammana Pada' that was sung by a group of ladies during the month of Kartik. A single or series of earthen lamps were lit late in the night and all the women folk gathered around and sang this number which was in praise of Kunti the mother of Pandavas. The sweet strains emanating from voices whose tone was not cultivated but natural; left a haunting effect. And during Sravana Bhajana parties came in the streets. These Bhajana groups were formed from all sections of the society. The songs were mostly from the Haridasa tradition but there were songs also from other traditions like Siva, Sakti, Avadhuta etc. rendered by these parties. Supported by Harmonium and Tabla both tied to the waists of the players, and a lamp preceding, the Bhajana parties sang with a fervour and sometimes with gusto. The full throated singing of the members enthused some bystands too to join when the party wended its way through the streets. I remember particularly parties from the Harijan colony whose members were endowed with clear ringing voices and the collective singing was haunting in effect. It was customary for the party to halt at cross-roads and it was mandatory for people who passed that way to drop coins in the lamp. Some of them also joined in the singing with the group.

And then there were some programmes that acted as a bridge between music and literature. The first of them is Gamaka. In the context of music, Gamaka is defined as ornamentation. But in Karnataka it was the age old art where the ancient classics were recited musically. It was a combination of speech and song. While the song part rendered the verses musically, set to pre-ordained ragas, the speech part gave the explanation and commentary. Old Kannada classics like Adi Purana of Pampa. Girija Kalyana of Harihara, Basavapurana of Bhima Kavi, Prabhulinga Leela of Chamarasa, Channabasavapurana of Virupaksha Pandita, Mahabharata of Kumara Vyasa, Jaimini Bharata of Lakshmeesa, Ramayana of Torave Narahari, Rajasekhara Vilasa of Shadaksharadeva, Bharatesa Vaibhava of Ratnakaravarni etc. were the popular works that were taken up for this musical recitation. In fact some of these works that were printed from the old manuscripts even carried the name of the raga in which it was to be rendered at the commencement of each chapter. Gamaka programmes were organised during both social and religious events and in the former case whenever a sizeable section found leisure and were in a mood to savour the work or recapture its beauty and message, and as a part of the event in the later case. Any public place, like the Chavadi the meeting place of the village, a temple, any patron's residence or even a spacious jagali or Pial was enough for a Gamaka session depending upon the numbers in the gathering or the importance of the event. While Gamaka was mostly treated as a noble pastime, sometimes it also acquired ritualistic overtones. Suppose when an interested patron desired to have the recitation of Gamaka as a part of some

spiritual event, it started with appropriate rituals like the invocation of the blessings of the gods, the propitiation of the Ganapathi and prayer for Saraswathi etc. The Gamaki seated at one end of the hall had the assigned work before him while oil lamps were placed on either side. After each chapter there would be mangalarathi and at the conclusion of the day's portion of recitation, there would be another mangalarathi and distribution of prasadam. In the day of the conclusion of the recitation of the entire work, another elaborate worship and managalarathi followed and in some cases with annadaana or the feeding of the devotees.

Gamaka vaachaana had been so closely woven into the social fabric of Karnataka that it was popular among all classes. And even a modest hamlet could boast of a Gamaki either independently or the school master himself could be a Gamaki Kumara Vyasa Bharata was the most popular and much reverred classic. Besides the several episodes which were too well known to the people, the chapter especially relating to the Vidura neethi served to buttress the moral standards of the people. I remember an instance which exemplifies this. Once travelling in a bus covering rural area, I found some people getting into it at some village on the road. Among them was an old Muslim who looked like a saint, with his flowing white beard and spotlessly white dress including the turban. The bus had to pass through a Taluk head quarter where all these people got down. Because the bus was to halt at that place for some time being the lunch of the driver and conductor, I got down to stretch myself. And going near the Taluk office I found a crowd had collected under a tree. Curiosity drew me there. To my surprise I found that the Muslim gentleman was addressing a crowd of villagers who came in the same bus. He was reciting verses from the Vidura neethi of Kumara Vyasa Bharata, explaining each line also with commentary and admonishing the villagers. It seems they belonged to two parties to a dispute which had been filed in the Tahsildars court. They had already undertaken half a dozen trips to several adjournments. Quoting relevant verse the Muslim was admonishing the villagers how they had lost their peace of mind and ruining themselves through this dispute which had to be solved through mutual discussion with a spirit of give and take. There were a good number of muslims too who were well versed in this classic.

Next was Yagshagana. There were two varieties here. One was a visual presentation on the stage. Another was a musical recitation done at Home mostly by a group of ladies. Here the musical content was more. The work contained besides prose, verse and also a good number of songs. The story unfolded through these forms sung in time honoured ragas indicated by the author. Though texts were also placed before the principal vocalist, she had learnt the whole piece and memorised it. Here even prose was sung with a raga. The prose part served the function of a commentary of the Gamaka. While the vocalist narrated and unfolded the story through these forms, at some places the other ladies who had gathered to listen also joined and the collective singing had an enlivening effect. The recitation of the Yakshagana, though considered as a pastime, had also ritualistic overtones, like the Ganapathi pooja, mangalarathi after each episode and a function and distribution of prasadam after completing the recital of the entire work.

And then Harikatha or Kathakalakshepa. This form was very popular throughout Karanataka. This had a more polished musical content. The story was expounded through many froms like Shloka, Vrita song and also classical compositions. The narration was interpersed with numerous interesting upakatha or stories so that the entire performance held the attention of the audience. Harikathas were usually held in the evenings going far into the night depending upon the mood of the performer and the receptivity of the audience. In many mathas, and some homes of rich patrons, the jagarana of Ekadasi or Sivaratri was celebrated through the Harikatha. Another favourite place for the exposition was the village Ramamandir. Like the Chavadis most of the major villages and towns in the interior had also Ramamandirs decorated with paintings of deities with a large size painting of Ramapattabhishekam in the middle. It was the abode of the weekly bhajan sessions on Saturday evenings. On the day of Ekadasi Harikathas were performed through donations from patrons. And this was mandatory during the Ramanavami festivities which had a long time tradition in Karnataka. Except for those affluent institutions which could afford to organise music concerts, all the other Ramamandirams organised Harikatha performance during those ten days of Ramanavami. A Harikatha Vidwan well-versed in music and with considerable oratorial skills could hold the audience spell bound throughout and would also earn considerable amount through the circulation of the arati plate besides the usual fee. But Kathakas who did not have the skill would circulate the arati plate whenever they saw the audience moving away in the fringes to collect as much possible. Some wily Katha Vidwans would do this circulation of the plate several times during the performance. Harikatha required the knowledge of music and oratorial skill, depth of knowledge in several languages like Sanskrit, Telugu, Tamil etc. besides Kannada, scholarship in Paranas and allied works so that they could make the whole performance interesting and informative. But that scholarly tribe of Harikatha vidwans is disappearing fast.

Two other forms that generated and sustained interest in music were traditional drama and Yakshagana or Bayalata as it was called because the plays were performed in open. Traditional dramas were influenced by ancient Sanskrit drama. Many of the actors playing major roles were well grounded in classical music. The drama was heavily laced with music most of which was in classical ragas. Most of the characters would burst into a song at any moment and sometimes the villain or any other character would sing lustily even when he was to die or in death throes and breath his last with a song on his lips. But the songs coming at appropriate or inappropriate times carried the very essence of the ragas. And when two characters indulged in what was called as 'dialogue' that a singing alternatively they improvised with all vocal gyrations and introduction of exotic tonal shades. Kannada stage was ideal ground for experiment in music and the actors also utilised the opportunity well.

Yakshagana was on a different plane.

It was folk theatre. It has also its quota of songs and free running versus. And music, though based on the classical, nevertheless had some crudity in tune with rural taste. There was more of rhythm and its variation because the characters besides acting also danced. Thus music so closely integrated into the life of the people, naturally inculcated an interest and also taste for the art in the people. Those who improved their taste and got better informed through constant exposure attended concerts of classical music.

My earliest remembrance of a classical music concert was of Bidaram Krishnappa. It was about seventy years ago. The picture is still vivid in my memory. Krishnappa was fair complexioned, a thick white moustache gracing his upper lip. He was wearing a lace turban as befitting at Vidwan of the Palace. He was dressed in a close collar coat and lace dhoti with an angarekhu. It was an imposing personality automatically commanding respect. Just behind on either side two disciples were playing Tamburas. On his right was seated the Violinst, one of his discip0les, the blind A.S. Shivarudrappa. And on the other side was seated the percussionist Nanjappa playing Tabla. Krishnappa had a booming voice which was powerful and clear even in the high pitch. Other concerts during that time were not much different except for different figures. In a concert during those days the vocalist was always supported by two tamburas, one Violin and One Tabla. For a long time i.e. till the ninteen twenties, the musicians were supported by only Tabla and not Mrudangam as it is practice now. The musicians were familiar with Mrudangam no doubt. One of the Travancore brothers in the Mysore darbar played Mrudangam. But the musicians performed Tabla both in Mysore and Bangalore. It was after the arrival of Muthuswamy Thevar and his appointment as the Place Vidwan, the musicians started availing the support of Mrudangam. Now Tabla is played to support only Hindustani or Light music. All the performers of classical Karnatic music have the support of Mrudangam now. During those days microphones were unknown. Therefore vocalists had geared their voices to a fairly high ṣhruti-Black two. Naturally the voices had tension and could give full blooded forms to the ideas. The duration of a concert too would be not less than four hours. And the ragas were treated in an expansive form. Most of the compositions for them served as themes for spontaneous and impromptu improvisations through neraval and rounded off with attractive swaraprastara.

I remember numerous occasions of this nature. It was a concert of Mysore Vadudevachar. He started with the usual Varnam and next his own composition invoking the blessings of Ganapathi and then took up the Kriti 'Mayatheetha Swaroopini' of Tanjavur Poonaiah Pillai. After the Pallavi he sang the Charanam starting as 'Mayamalava Gaula Deshamuma' and took this part for improvisation. There was a virtual flow of designs, some on predictable lines and more spontaneous and unanticipated. There was no dull moment and by the time this stage passed nearly two hours had passed. I have witnessed such expansive exposition of ragas by other musicians too. And people avidly listened and enjoyed such new experience in Raga and swara. And one or more compositions enroute would be subjected to such treatment finally leading to the high watermark of the concert: Alapana, Tanam and Pallavi. Though each of these three elements were to receive equal attention it all depended upon the musician too especially for which of them he was partial. In the case of Bidaram Krishnappa for instance, he sang a spacious alapana followed by Tanam more or less as a routine. And Pallavi was subjected to a spacious treatment. In the case of Vasudevachar there was special emphasis on Tanam where he presented an astonishing varieties sometimes simulating various gatis and the neraval of the Pallavi was attractive as much on the play of the words as the melody. This part was not standardised form but carried an individual stamp of each musician.

One other aspect of these concerts which I attended during my student days was the correct sruti pramana. As student of music were never missed the concerts of senior vidwans. More often when a person like Vasudevachar started an alapana and dwelt for some time on the lower Nishada, middle Rishabha, Gandhara etc. there was a competition among us about which raga would be emanating on the basis of the intonation of this one swara itself. Our guess would be mostly correct. And once when I asked Acharya how could that happen, he said it all depends upon the correct sruti pramana. The ragas like Sankarabharanam, Kalyani or Hamsadhvani all have Kakali Nishada. But there is a slight difference in the scruti pramana and which gives the correct form and character to these ragas. One has to acquire this through hard practice and constantly listening to the music of great figures. As said already, most of the concerts were of a duration between four and five hours. Towards the post Pallavi part if the musician was well versed in sahitya he used to sing a Slokam in ragamalika and others rendered devotions of mostly Haridasa. Very few sang the highly nomantic javalis.

Thus one could see that these music concerts of olden days were a real aesthetic experience in space and time. For some it was also a spiritual experience in that the compositions glorified deities and many musicians performed with a fervour and spirit of devotion. And the disparity between the music of those times and now is fairly wide. In brief among the vanishing traditions the first one is the disappearance of music from one life. We no longer hear songs emanating from people as a part of their lives. One of the recent marriages I attended could be an instance. Among those well dressed ladies present not cone could render an arati song let alone other songs appropriate to the various stages of the marriage. Two old ladies from among those present came forward to perform the arati with appropriate songs. Later they also regaled the people who had gathered there with songs related to the in-laws which were so full of fun. While all the assembled maidens enjoyed the fun not one of them knew these songs nor they were inclined to learn. And the position at other situations or places like temples is pathetic. Even in the marriages where Nagasvaram music is mandatory, it has been casual than serious. In one marriage I heard the Nagasvaram party playing 'Idi Nyayama Sri Ramachandra' the entire party including the Nagasvaram were blissfully ignorant of the irony. In some marriages, cassette has been substituted

for Nagasvaram wherever necessary. The concerts have become anaemic and provide capsule versions. And where the accompanying instrumentalists were functioning as supports, now they try to dominate.

One more interesting feature I remember in Mysore's Music was the performance of Jalatarang. Its entry into Mysore is interesting. Ustad Moula Bux of Baroda came down south not only to study Karnatic music but particularly the playing of Vina. He had been appointed as a Darbar musician by the Maharaja. Once he gave performance on Jalatarang. Till then neither the Maharaja nor the Vidwans of the palace had seen this instrument. Next day while in the midst of the Vidwans the Maharaja was speaking so highly of this rare instrument. Among the assembled was Vina Seshanna, who was not present during the previous evening's jalataranga performance. He requested the Maharaja to arrange for another performance. After the performance he suggested that the Ustad leave those cups of the Jalatarang behind. After a careful study of the function of the cups and mode of producing melody, next day Seshanna suggested that he was ready to perform on the Jalatarang. The Maharaja was surprised but arranged the performance. Needless to say Seshanna played beautifully, of course, the Karnatic music over this instrument. In addition he taught some other musicians of the Darbar to play Jalatarang. When he went to Ramanathapuram to give performances during the annual festivals, Seshanna also played Jalatarang besides the usual Vina. The Raja was so impressed that he requested to train one of the young musicians of his Darbar. Anayampatti Subbayar, who popularised it in south. Besides Seshanna, many other Vidwans of Mysore were also playing Jalatarang. But only a couple of them chose concert stage. B. Devendrappa to instance. Another one was Lakshminarayanachar, a Hotelier cum Jalatarang player. But that tradition has gradually disappeared with the older guard passing away. Another instrument which was being played the Mysore Vidwans was Swarabat, something like Sarod. But that generation of players has disappeared.

(Reproduced from JIMs, 1997 issue)

# 'ಅನನ್ಯ, ಅಭಿನವ'

- ಶತಾವಧಾನಿ ಡಾ| ಆರ್. ಗಣೇಶ್

ನಮ್ಮ ಕರ್ನಾಟಕದವರೆಂದೇ ವಿದ್ವಾಂಸರು ಗುರುತಿಸಿರುವ ಕ್ರಿ.ಶ. ಹನ್ನೆರಡನೆಯ ಶತಾಬ್ದಿಯ ಮಹಾ ಗಣಿತ ಶಾಸ್ತ್ರಜ್ಞ ಭಾಸ್ಕರಾಚಾರ್ಯರ ಬಗೆಗೆ ಅವರದೇ ಕೃತಿ 'ಲೀಲಾವತಿ'ಯಲ್ಲಿ ಕಡೆಗೊಂದು ಶ್ಲೋಕವಿದೆ. ಇದು ಬಹುಶಃ ಅವರದೋ ಅವರ ಶಿಷ್ಯರೊಬ್ಬರದೋ ಪದ್ಯವೆಂದು ಊಹೆ. ಆ ಒಕ್ಕಣೆಯಂತಿದೆ:

ಅಷ್ಟೌ ವ್ಯಾಕರಣಾನಿ ಸಪ್ತ ಭಿಷಜಾಂ ವ್ಯಾಚಷ್ಟ ತಾಃ ಸಂಹಿತಾಃ

ಷಟ್ ತರ್ಕಾನ್ ಗಣಿತಾನಿ ಪಂಚ ಚತುರೋ ವೇದಾನಧೀತೇ ಸ್ಮಯಃ।

ರತ್ನಾನಾಂ ತ್ರಿತಯಂ ದ್ವಯಂ ಚ ಬುಬುಧೇ ಮೀಮಾಂಸಯೋರಂತರಂ

ಸದ್ಬ್ರಹ್ಮೈಕಮಗಾಧಬೋಧಮಹಿಮಾ ಸೋಽಸ್ಯಾಃ ಕವಿರ್ಭಾಸ್ಕರಃ॥

ಈ ಪ್ರಕಾರ ಭಾಸ್ಕರಾಚಾರ್ಯರು ಕೇವಲ ಗಣಿತಶಾಸ್ತ್ರಜ್ಞರಷ್ಟೇ ಆಗಿರಲಿಲ್ಲ. ಮತ್ತೂ ಏನೆಲ್ಲ ಆಗಿದ್ದರು. ಅವರಿಗೆ ಎಂಟು ಬಗೆಯ ವ್ಯಾಕರಣಗಳಲ್ಲಿ, ಏಳು ಬಗೆಯ ವೈದ್ಯಕೀಯ ಸಂಹಿತೆಗಳಲ್ಲಿ, ಆರು ಬಗೆಯ ತರ್ಕ ವಿದ್ಯೆಗಳಲ್ಲಿ, ಐದು ಬಗೆಯ ಗಣಿತ-ಖಗೋಲ ಸಿದ್ಧಾಂತಗಳಲ್ಲಿ, ನಾಲ್ಕು ವೇದಗಳಲ್ಲಿ, ಮೂರು ತೆರನಾದ ರತ್ನ ಶಾಸ್ತ್ರಗಳಲ್ಲಿ, ಎರಡು ಬಗೆಯ ಮೀಮಾಂಸದರ್ಶನಗಳಲ್ಲಿ ಪಾಂಡಿತ್ಯವಿದ್ದುದಲ್ಲದೆ ಏಕಮೇವಾದ್ವಿತೀಯವೆನಿಸಿದ ಪರಬ್ರಹ್ಮದ ಅರಿವೂ ಇತ್ತೆಂದು ತಿಳಿಯುತ್ತದೆ. ಅವರ ಲೀಲಾವತಿಯನ್ನಷ್ಟೇ ನೋಡಿದರೆ ಸಾಕು, ಭಾಸ್ಕರಾಚಾರ್ಯರೆಂಥ ಕವಿಯಾಗಿದ್ದರೆಂಬುದೂ ಸ್ಪಷ್ಟವಾಗುತ್ತದೆ. ಇಂಥ ಬಹುಶಾಸ್ತ್ರ ಕೋವಿದರನ್ನು ಯಾವ ಕಾಲದಲ್ಲಿಯೂ ಕಾಣುವುದು ಕಷ್ಟ. ಸುಮಾರು ಸಾವಿರ ವರ್ಷಗಳ ಹಿಂದೆ ಕಾಶ್ಮೀರದಲ್ಲಿ ಅವತರಿಸಿದ್ದ ಮಹಾ ಮಹೇಶ್ವರ ಅಭಿನವ ಗುಪ್ತಪಾದರಾದರೂ ಇದೇ ವರ್ಗದವರು. ವೇದ ಭಾಷ್ಯಾದಿಗಳ ನಿರ್ಮಾಪಕರಾಗಿ 'ಸುಧಾನಿಧಿ'ಗಳೆಂಬ ಹೆಸರುಗಳುಳ್ಳ ಹಲವಾರು ವಿಶ್ವಕೋಶ ಸದೃಶವಾದ ಕೃತಿನಿಧಿಗಳನ್ನು ಬರೆದ ನಮ್ಮ ನಾಡಿನವರೇ ಆದ ಶ್ರೀ ಸಾಯಣಾಚಾರ್ಯರು ಕವಿಗಳೂ ಕಲಿಗಳೂ ಆದ ಬಹುಶಾಸ್ತ್ರ ಕಲಾಕೋವಿದರು, ವಿಜಯನಗರ ಸಾಮ್ರಾಜ್ಯದ ಮುಂಬೆಳಗಿನ ಕಾಲದಲ್ಲಿ ಮಹಾ ಮಂತ್ರಿಗಳಾಗಿದ್ದು ರಾಜ್ಯವನ್ನು ಮುನ್ನಡೆಸಿದವರು. ಹೀಗೆಯೇ ಸಾಹಿತೀ ಸಮರಾಂಗಣ ಸಾರ್ವಭೌಮನಾಗಿದ್ದ ಪರಮಾರಚಕ್ರೇಶ್ವರ ಭೋಜರಾಜನು ಹತ್ತಾರು ಶಾಸ್ತ್ರ-ಕಲೆಗಳನ್ನು ಕುರಿತು ಅನೇಕ ಬೃಹದ್ಗ್ರಂಥಗಳನ್ನು ವೈಶಿಷ್ಟ್ಯಪೂರ್ಣವಾಗಿ ಬರೆದ ಮಹಾಪಂಡಿತ. ಶ್ರೀ ಶಂಕರ ಭಗವತ್ಪಾದರ ಶಾರೀರಕ ಭಾಷ್ಯಕ್ಕೆ ವ್ಯಾಖ್ಯೆಯನ್ನು ರಚಿಸಿದ ವಾಚಸ್ಪತಿ ಮಿಶ್ರರು ಸಮಸ್ತ ದರ್ಶನಗಳಲ್ಲಿಯೂ ಕೋವಿದರಾಗಿದ್ದು ಆಯಾ ದರ್ಶನಗಳ ಬಗೆಗೆಲ್ಲ ಪ್ರಾಮಾಣಿಕವೂ ಮೌಲಿಕವೂ ಆದ ಆಧಾರ ಗ್ರಂಥಗಳನ್ನು ರಚಿಸಿದ ಧೀಮಂತರು. ಹೀಗೆಯೇ ಶ್ರೀಮನ್ನಿಗಮಾಂತದ ದೇಶಿಕರೆಂದು ವಿಶ್ರುತರಾದ ವೆಂಕಟನಾಥರೂ, ಅಪರಶಂಕರರೆಂದೇ ಆದರಿಸಲ್ಪಟ್ಟ ಅಪ್ಪಯ್ಯ ದೀಕ್ಷಿತರೂ ಅವರ ಸಮಕಾಲೀನರಾಗಿದ್ದ ಶ್ರೀ ವಿಜಯೀಂದ್ರ ತೀರ್ಥ, ರತ್ನಖೇಟ ಶ್ರೀನಿವಾಸ ದೀಕ್ಷಿತ, ಗೋವಿಂದ ದೀಕ್ಷಿತರಂಥವರೂ ಇದೇ ತೆರನಾಗಿ ಸರ್ವತಂತ್ರ ಸ್ವತಂತ್ರರೆಂದೆನ್ನಿಸಿದ್ದರೆಂಬುದು ಇತಿಹಾಸ ಪ್ರಸಿದ್ಧ. ನಮ್ಮ ಪರಂಪರೆಯು ಕೇವಲ ಒಂದೇ ಶಾಸ್ತ್ರವನ್ನು ಓದಿದವನು ಆ ಶಾಸ್ತ್ರದಲ್ಲಿಯ ತೊಡಕುಗಳನ್ನು ಬಿಡಿಸಲೂ ಅಸಮರ್ಥನಾಗುವನೆಂದು ಸಾರಿದೆ. ಹೀಗಾಗಿಯೇ 'ಏಕಂ ಶಾಸ್ತ್ರಮಧೀಯಾನೋ ನ ಗಚ್ಛೇತ್ ಶಾಸ್ತ್ರ ನಿರ್ಣಯಂ' ಎಂಬ ಮಾತು ಹುಟ್ಟಿದೆ.

ಇದೀಗ ಕ್ರಿ.ಶ. ಇಪ್ಪತ್ತೊಂದನೆಯ ಶತಾಬ್ದಿಯ ಆರಂಭದಲ್ಲಿ ಇಂಥ ಸರ್ವ ತಂತ್ರ ಸ್ವತಂತ್ರರೂ ಬಹುಶಾಸ್ತ್ರ ಕಲಾವ್ಯುತ್ಪನ್ನರೂ ಆದ ಮಹನೀಯರು ತಮ್ಮ ನಡೆ-ನುಡಿಗಳಿಂದ ಎಲ್ಲರ ಆದರಾಭಿಮಾನಿಗಳಿಗೆ ಪಾತ್ರರಾಗಿ ನಮ್ಮ ನಡುವೆಯೇ ಸುಳಿದಾಡುವವರು ಉಂಟೇ? ನಮ್ಮ ಈ ನಗರ (ಬೆಂಗಳೂರು)ದಲ್ಲಿಯೇ ಇದ್ದಾರೆಯೇ? ಎಂದು ಯಾರಾದರೂ ಪ್ರಶ್ನಿಸಿದರೆ ನನಗೆ ಕೂಡಲೇ ಹೊಳೆಯುವ ಉತ್ತರ ವಿದ್ಯಾಲಂಕಾರ ಆಚಾರ್ಯ ಸಾ.ಕೃ. ರಾಮಚಂದ್ರರಾಯರೆಂದೇ. ಇವರು ದಿಟವಾಗಿ ವಿದ್ಯೆಗೇ ಅಲಂಕಾರ ಪ್ರಾಯರು.

ಇವರ ಬಗೆಗೆ ಹೇಳುವುದಾದರೆ ಹೇಗೆ? ಹೇಳದಿರುವುದಾದರೂ ಹೇಗೆ? ಅವರದು ಬರಿಯ ಪ್ರಸಿದ್ಧಿಯಲ್ಲ, ಸಿದ್ಧಿ; ಸಕಲ ವಿದ್ಯಾಸಮೃದ್ಧಿ. ಸಾರಸ್ವತ ಸುಧಾಬ್ಧಿ. ಇಂಥವರೊಬ್ಬಿಬ್ಬರನ್ನು ಪಡೆದರೂ ಸಾಕು, ಆ ನಾಡು-ನುಡಿಗಳಿಗೆ ಅರ್ಥ ಗೌರವ ದಕ್ಕುತ್ತದೆ. ಇಂಥವರೊಬ್ಬರಿದ್ದರೆ ಸಾಕು, ಆ ಸಂಸ್ಕೃತಿಗೆ ಹೆಮ್ಮೆಯುಂಟಾಗುತ್ತದೆ. ಈಚೆಗೆ ಅವರು ಕೈಗೊಂಡ ಮೂವತ್ತು ಸಂಪುಟಗಳಿಗೂ ಮಿಕ್ಕ ಋಗ್ವೇದ ವ್ಯಾಖ್ಯಾನವನ್ನಷ್ಟೇ ಗಮನಿಸಿ ಅವರನ್ನು ವೇದ ನಿಧಿಯೆನ್ನೋಣವೇ? ಆಯುರ್ವೇದವನ್ನೂ ಬಲ್ಲವರವರು, ಅಲ್ಲಿಯೂ ಆಕರಕೋಶಗಳನ್ನು ನಿರ್ಮಿಸಿದ್ದಾರೆ. ಅವರ ಹತ್ತಾರು ಸಂಪುಟಗಳ ಆಗಮಕೋಶ-ಪ್ರತಿಮಾಕೋಶ-ವಾಸ್ತು ಶಿಲ್ಪಕೋಶ-ದೇವತಾ ಕೋಶ ಸಮುಚ್ಚಯಾದಿಗಳನ್ನು ಗಮನಿಸಿ ಅವರನ್ನು ಸರ್ವಾಗಮನಸರ್ವಸ್ವವೆನ್ನೋಣವೇ? ಸಂಗೀತಾದಿ ವಿವಿಧ ಲಲಿತ ಕಲಾ ರಹಸ್ಯವನ್ನೂ ಬಲ್ಲ ಸಂಗೀತಕಲಾ ರತ್ನರವರು. ವೇದಾಂತ, ಮೀಮಾಂಸಾ, ನಿರುಕ್ತ, ಮಂತ್ರಶಾಸ್ತ್ರ, ತಂತ್ರ ವಿದ್ಯಾದಿಗಳನ್ನು ಬಲ್ಲ ವೈದಿಕ ಸಂಪ್ರದಾಯದ ಶಾಸ್ತ್ರ ಚೂಡಾಮಣಿಗಳೆನ್ನೋಣವೇ? ಜೈನ-ಬೌದ್ಧಾದಿದರ್ಶನಾಂತರಗಳ ಮೂಲ-ಚೂಲಗಳನ್ನೂ ಅರಿತುನುರಿತ ವಿಶ್ವಕುತೂಹಲಿಗಳವರು. ಶಿಲ್ಪವೇ, ಸ್ಥಾಪತ್ಯವೇ, ಚಿತ್ರವೇ, ಸಾಹಿತ್ಯವೇ, ಯಾವುದುಂಟು? ಯಾವುದಿಲ್ಲ? ಕಾಲೇಜಿನ ವ್ಯಾಸಂಗದ ದೃಷ್ಟಿಯಿಂದ

ಹೇಳುವುದಾದರೆ ಮನಶ್ಶಾಸ್ತ್ರದ ಪೂರ್ವಾಪರಗಳನ್ನು ಅರ್ಥೈಸಿದ ರಾಯರು ಆ ಕ್ಷೇತ್ರದಲ್ಲಿ ಅಧ್ಯಾಪನವನ್ನು ಮಾಡಿದ್ದಲ್ಲದೆ ತೌಲನಿಕಾಧ್ಯಯನದ ಸಂಶೋಧನೆಗಳನ್ನೂ ನಡೆಸಿದ್ದಾರೆ. ಮ್ಯಾನೇಜ್‌ಮೆಂಟಿನಿಂದ ಮೊದಲ್ಗೊಂಡು ಮಾಡರ್ನ್‌ಸೈನ್ಸಿನ ವರೆಗೆ ಅನೇಕ ಆಧುನಿಕ ವಿದ್ಯೆಗಳಿಗೆ ಪರಂಪರೆಯ ಕೊಂಡಿಗಳನ್ನು ಬೆಸೆದಿದ್ದಾರೆ. ಅವರ ಗ್ರಂಥ ರಾಶಿಯನ್ನೇ ಕಂಡರೆ ಅಣ್ಣಪ್ಪ ದೈವದಂಥ ಜಾನಪದ ದರ್ಶನವಿರಲಿ, ನಾಟ್ಯ ಶಾಸ್ತ್ರ ಹಾಗೂ ಪ್ರತಿಭೆ ಎಂದರೇನು? ಎಂಬಂಥ ಸಾಹಿತ್ಯ ಮೀಮಾಂಸೆಯಿರಲಿ, ಟಿಬೆಟನ್ ತಾಂತ್ರಿಕ ಸಂಪ್ರದಾಯದ ಬಗೆಗಿನ ಆಂಗ್ಲ ಭಾಷಾ ಸಂಪುಟಗಳಿರಲಿ ಪೌರವ ವಿಜಯಾದಿಗಳಂಥ ಸಂಸ್ಕೃತ-ಪ್ರಾಕೃತ ರಚನೆಗಳಿರಲಿ, ಪುರಂದರ ದರ್ಶನಗಳಂಥ ಸಂಪಾದಿತ ಗ್ರಂಥ ರಾಶಿಯಿರಲಿ. ಯಾವುದರಲ್ಲಿಯೂ ಹೊಸ ಹೊಳಹಿನ ಹಸುರುತನ ಎದ್ದೆದ್ದು ತೋರುತ್ತದೆ. ಅಂಗೈ ಅಗಲದ ಪುಸ್ತಕಗಳಾದ ನಗೆಯ ನೆಲೆ. ವಿವಾಹ ಪದ್ಧತಿಗಳು, ಜಯದೇವ, ವಾಲ್ಮೀಕಿ, ಅಶ್ವಘೋಷ ಅಂಥವುಗಳಿಂದ ಮೊದಲ್ಗೊಂಡು ಪ್ರೌಢ ಗಂಭೀರವಾದ ದರ್ಶನೋದಯ, ಡೆವಲಪ್‌ಮೆಂಟ್ ಆಫ್ ದಿ ಋಗ್ವೇದಿಕ್ ಥಾಟ್‌ನಂಥ ಗ್ರಂಥಗಳವರೆಗೆ ಎಲ್ಲೆಲ್ಲಿಯೂ ಅವರ ವಿಶಾಲ ವ್ಯಾಸಂಗದ ಮತ್ತೇಭವಿಕ್ರೀಡಿತವು ತಾಂಡವಿಸುತ್ತದೆ.

ಇನ್ನವರ ಬರವಣಿಗೆಯೋ ಬಂಗಾರದ ಬೆರಗೇ ಸರಿ. ಅಂಥ ಹದ-ಪಾಕ, ನಯ-ನಾಜೂಕು, ಇನಿ-ಬನಿ, ಕಸುರಿ-ಕೌಶಲ, ಮಾರ್ದವ-ಸೌಷ್ಠವಗಳ ಆ ಪ್ರಸನ್ನಗಂಭೀರ ಶೈಲಿ ಅದೆಷ್ಟು ತಪಸ್ಸಿನ ಫಲವೋ! ಕಥೆ-ಕಾದಂಬರಿ (ರಾಯರು 'ಸುಖಿ ಪ್ರಾರಬ್ಧ' ಎಂಬೊಂದು ರೋಚಕ ಕಾದಂಬರಿಯನ್ನೂ ಬರೆದಿದ್ದಾರೆ!) ವಿಮರ್ಶೆ-ವ್ಯಕ್ತಿ ಚಿತ್ರ, ವಿವೃತ್ತಿ-ವಿಶ್ಲೇಷಣೆ (ಈಶೋಪನಿಷತ್ತಿಗೆ ಎಲ್ಲ ಭಾಷ್ಯ ವ್ಯಾಖ್ಯೆಗಳ ಬೆಳಕಿನಲ್ಲಿ, ಬರೆದ ವಿಶ್ಲೇಷಣಾತ್ಮಕ ವಿವೃತ್ತಿಯಲ್ಲಿ ಉಲ್ಲೇಖಾರ್ಹ), ಜೀವನ ಚರಿತ್ರೆ (ಶಾರದಾ ಪೀಠದ ಮಾಣಿಕ್ಯ, ಪುರುಷ ಸರಸ್ವತಿ, ಕಲಾವಿದ ಕೆ. ವೆಂಕಟಪ್ಪ ಇತ್ಯಾದಿ) ಅನುವಾದ-ಸಂವಾದ ಮುಂತಾದ ಎಲ್ಲ ಬಗೆಯ ಅಭಿವ್ಯಕ್ತಿಗೂ ಬಾಗಿ ಬರುವ, ಬಳಸಿದಷ್ಟೂ ಬೆಳೆದು ಬೆಳಗುವ ಅವರ ಭಾಷಾ ಶಿಲ್ಪ ನಿಜಕ್ಕೂ ನಮ್ಮ ನುಡಿಯೊಡಲಿನ ರಸವಿಸ್ಮಯ. ವಿವಿಧ ಕಲೆಗಳಲ್ಲಿ ಪ್ರಯೋಗಪರಿಣತಿ, ಬಹುಶಾಸ್ತ್ರಗಳಲ್ಲಿ ಅಪಾರದೀಧಿತಿ, ಹತ್ತಾರು ಭಾಷೆಗಳಲ್ಲಿ ಅನರ್ಗಳ ಪಾಂಡಿತಿ, ವಿವಿಧ ಸಾಂಸ್ಕೃತಿಕ ಸಂದರ್ಭಗಳಲ್ಲಿ ಅಸಮಾನಸಾಧನಸಂಪತ್ತಿ ಎಲ್ಲಿಂದೆಲ್ಲಿಗೆ ಈ ವ್ಯಾಪ್ತಿ ! ಎಂಥ ಗಹನತತ್ತ್ವದ ಸಂಕೀರ್ಣ ಸಂದರ್ಭವನ್ನೂ ಅರಿಯಬಲ್ಲಬುದ್ಧಿ, ಆ ಅರಿವನ್ನೆಲ್ಲ ಅಡಕವಾಗಿ ಪ್ರಸಂಗೋಚಿತಪರಿಪಾಕದಿಂದ ಪ್ರಯೋಗಿಸಬಲ್ಲ ಚಿತ್ತ (ರಾಯರ ನೆನಪಿನ ಶಕ್ತಿ ಅಸಾಧಾರಣ, ಅದೆಷ್ಟೋ ಭಾಷಣಗಳನ್ನವರು ಬರಿಗೈಯಲ್ಲಿಯೇ ನಿರ್ವಹಿಸಿದ್ದಾರೆ, ನಿರ್ವಹಿಸುತ್ತಿದ್ದಾರೆ ಕೂಡ. ಉದ್ಧರಣಗಳೆಲ್ಲ ವಾಚೋವಿಧೇಯ). ಆ ಪ್ರಮೇಯ ನಿರೂಪಣೆಯಲ್ಲಿ ಎಣೆಯಿಲ್ಲದ ತಿಳಿತನ, ತುಂಬುತನ ಹಾಗೂ ನಳನಳಿಸುವ ಬೆಳಗಿನ ಬೆಡಗುಗಳನ್ನು ಬಗೆಗಾಣಿಸಬಲ್ಲ ಮನಸು - ಈ ಒಂದೊಂದೂ ರಾಯರ ವಿದ್ಯಾದೇವಾಲಯ ಗೋಪುರದ ಕಾಂಚನ ಕಲಶಗಳೇ ಸರಿ. ಅವರು ನಮ್ಮೊಡನಿರುವ ಸಂಚಾರಿ ಸಂಸ್ಕೃತಿ ಸರ್ವಸ್ವವೇ ಸೈ.

ಪ್ರೊ. ರಾಮಚಂದ್ರರಾಯರದು ಸ್ವಯಂನಿರ್ಮಿತ ವ್ಯಕ್ತಿತ್ವ. ಪಾಲಕ್ಕಾಡು ನಾರಾಯಣ ಶಾಸ್ತ್ರಿ, ಭದ್ರಾಂತ ನಾರದಮಹಾಸ್ಥವಿರ, ವಿನಯಚಂದ್ರಮುನಿ, ರಾಳ್ಲಪಲ್ಲಿ ಅನಂತಕೃಷ್ಣ ಶರ್ಮಾ, ಕಲಾವಿದ ಕೆ. ವೆಂಕಟಪ್ಪ ಹೆಮ್ಮಿಗೆ ದೇಶಿಕಾಚಾರ್ಯರಂಥ ಅನೇಕ ಪುಣ್ಯಶ್ಲೋಕ ಗುರುಗಳಿಂದ ವಿದ್ಯೆಯನ್ನು ಗಳಿಸಿ ''ತಸ್ಯ ಮೇ ಸರ್ವಶಿಷ್ಯಸ್ಯ ನೋಪದೇಶದರಿದ್ರತಾ'' ಎಂಬಂತಿದ್ದರೂ, ಯಾವುದಕ್ಕೂ ಕುರುಡಾಗಿ ಗಂಟುಬೀಳುವವರಲ್ಲ. ನಿಸ್ಸ್ಪೃಹರಾಗಿ ಅನುದಿನವೂ ಅನೇಕ ವರ್ಷಗಳಿಂದ ಆಸಕ್ತ ವಿದ್ಯಾರ್ಥಿಗಳಿಗೆ ಅನೇಕ ಶಾಸ್ತ್ರಗಳನ್ನು ಪಾಠ ಹೇಳುವ ಆದರ್ಶ ಗುರುಗಳಾಗಿ ಶಿಷ್ಯವತ್ಸಲರಾಗಿ ಗೌರವ ಭಾಜನರಾಗಿದ್ದೂ ಯಾವುದೇ 'ಮಠ'ವನ್ನು ತಮ್ಮ ಪ್ರಚಾರಕ್ಕಾಗಿ ಕಟ್ಟಿಕೊಂಡವರು ಇವರಲ್ಲ.

ತಮಗೆ ಸಂದ ಪ್ರಶಸ್ತಿಗಳಿಗಾಗಲಿ ಪುರಸ್ಕಾರಗಳಿಗಾಗಲಿ, ಸಮರ್ಪಿತ ಸಮ್ಮಾನಗಳಿಗಾಗಲಿ ನಿವೇದಿತನೀರಾಜನಗಳಿಗಾಗಲಿ ಅವರು ಬಗೆತೆತ್ತದ್ದಿಲ್ಲ, ನಗೆಬೀರಿದದ್ದಿಲ್ಲ. ಅಕಾಡೆಮಿಗಳ ಪ್ರಶಸ್ತಿಗಳ ಸುರಿಮಳೆಯೇ? ಸಂಘ-ಸಂಸ್ಥೆಗಳ ಸತ್ಕಾರವೇ ವಿಶ್ವವಿದ್ಯಾಲಯಗಳ ಮನ್ನಣೆಯೇ? ಸರ್ಕಾರದ ಸಮರ್ಚೆಯೇ? ಯಾವುದಕ್ಕೂ ಸಂಘ-ಸಂಸ್ಥೆಗಳ ಸತ್ಕಾರವೇ ವಿಶ್ವವಿದ್ಯಾಲಯಗಳ ಮನ್ನಣೆಯೇ? ಸರ್ಕಾರದ ಸಮರ್ಚೆಯೇ? - ಯಾವುದಕ್ಕೂ ಅವರು ನಿಷ್ಪಂದರು. ಅವರಿಗೆ ನಾವು ಹಲವರು ಅಭಿಮಾನಿಗಳು ಸೇರಿ ಅರ್ಥಪೂರ್ಣವಾದ ಅಚ್ಚುಕಟ್ಟಿನದೂ ಆದ ಸಂಭಾವನ ಗ್ರಂಥವೊಂದನ್ನರ್ಪಿಸಿ ಅವರ ಕೃತಿಗಳ ಬಗೆಗೊಂದು ವಿಚಾರ ಗೋಷ್ಠಿಯನ್ನೂ ಮಾಡಬೇಕೆಂದು ಹರಸಾಹಸ ಮಾಡಿದೆವಾದರೂ ಅವರು ಎಳ್ಳಷ್ಟೂ ಜಗ್ಗಲಿಲ್ಲವೆಂಬ ಸಂಗತಿಯನ್ನಿಲ್ಲಿ ಸ್ಮರಿಸಿದರೆ ರಾಯರ ಪೂಜಾವಿಮುಖತೆಯ ಆಯಾಮ ಅರಿವಾಗದಿರದು. ಅವರ ವ್ಯಾಸಂಗ ಲೇಖನ ಉಪನ್ಯಾಸ ಪ್ರವಚನಗಳೆಲ್ಲ 'ಸ್ವಾಂತಸ್ಸುಖಾಯ' ಸಾಗುವ ಲೀಲಾಖೇಲನ. ತಾವು ಬರೆದ ಅಸಂಖ್ಯ ಲೇಖನಗಳನ್ನೂ ('ಸುಧಾ' ಪತ್ರಿಕೆಗೆ ಅವರು ಬಹುಕಾಲ ಬರೆದಿದ್ದಾರೆ, ನಮ್ಮ 'ಅನನ್ಯ ಅಭಿವ್ಯಕ್ತಿ'ಗೇ ಸಾಕಷ್ಟು ಲೇಖನಗಳನ್ನಿತ್ತಿರುವುದಲ್ಲದೆ ಸಂಗೀತಕಲಾವಿದರ ಲೇಖನ-ಚಿತ್ರಮಾಲೆ, ದಿನದರ್ಶಿಕೆಯ ಸಜ್ಜಿಕೆ ಮುಂತಾದುವನ್ನೂ ನಡೆಸಿದ್ದಾರೆ. ಮೈಸೂರು ವಿ.ವಿ.ದ ಕನ್ನಡವಿಶ್ವಕೋಶಕ್ಕಾಗಿ ಬೆಲೆಯುಳ್ಳ ನೂರಾರು ಲೇಖನಗಳನ್ನು ಅನೇಕ ವಿಷಯಗಳ ಬಗೆಗೆ ಬರೆದಿದ್ದಾರೆ) ನೂರೈವತ್ತಕ್ಕೂ ಮಿಕ್ಕ ಪುಸ್ತಕಗಳನ್ನೂ ಅವರು ನೆನೆಯುವುದೇ ಇಲ್ಲ. ಬರೆಹವು ಮುಗಿದ ಬಳಿಕ ಅದರ ಬಗೆಗಿನ ಎಲ್ಲ ಮೋಹವೂ ನೀಗಿರುತ್ತದೆಂಬುದು ರಾಯರ ಇಂಗಿತ.

ನಮ್ಮ ಬಿರಿದಾದ ಸಂಸ್ಕೃತಿ-ಪರಂಪರೆಗಳ ಅಸಂಖ್ಯ ತಂತುಗಳನ್ನು ಕೂಡಿದ ಮಟ್ಟಿಗೂ ಅಖಂಡವಾಗಿ ರಕ್ಷಿಸಿ, ವ್ಯಾಖ್ಯಾನಿಸಿ, ವಿಶ್ಲೇಷಿಸಿ, ಬಾಳಿ, ಪ್ರಚುರಪಡಿಸುವುದರಲ್ಲಿ ಜೀವನಸಾರ್ಥಕ್ಯವನ್ನು ಕಾಣುತ್ತಿರುವ ಪ್ರೊ! ರಾಮಚಂದ್ರರಾಯರಿಗೆ, ಅವರ ಈ ಸಾರಸ್ವತ ಸವನಕ್ಕೆ ಏನೆಂದು ವಂದನೆ ಸಲ್ಲಿಸೋಣ? ಇನ್ನೆಂಥ ಯಜ್ಞಭಿಕ್ಷೆಯನ್ನು ಅರ್ಪಿಸೋಣ? ಅವರ ಈ ಎಲ್ಲ ಬಗೆಯ ವಿದ್ಯಾಸಮಾರಾಧನೆಗೂ ನಾವು ಎಂದೆಂದೂ ಋಣಿಗಳೆಂದು ಕೈಮುಗಿದು, ಕೈಕಟ್ಟಿ ಕೂರುವುದೊಂದೇ ನಮ್ಮ ಪಾಲಿಗೆ ಸಂದ ಪೂಜಾ ಭಾಗ್ಯ.

ಬೆಳ್ಮುಡಿಯ, ಬೆಳ್ನಗೆಯ, ಮಿಂಚುಗಂಗಳ, ಸಿತಸ್ಮಿತದ ರಾಮಚಂದ್ರರಾಯರ ಹೊರನೋಟದ ನಿಲವೇ ಅವರ ಅಂತರಂಗ ವೈಭವಕ್ಕೊಂದು ಮಣಿದರ್ಪಣ. ಹೆಚ್ಚಾಗಿ ಹಸನ್ಮುಖಿರೂ ವಿನೋದಶೀಲರೂ ಶುಚಿ - ರುಚಿಗಳ ಸ್ನೇಹಜೀವಿಗಳೂ ಆದವರಾದರೂ ನಿಮ್ಮ ರಸತ್ವಗಳನ್ನು ನಿರ್ಭೀತಿಯಿಂದ ಎಂಥವರಿಗೂ ಎಂಥ ವೇದಿಕೆಯಲ್ಲಿಯೂ ಅಡಿ ದಕ್ಕಿಸಿಕೊಳ್ಳಬಲ್ಲ ಕೆಚ್ಚು ಅವರದೇ, ಅವರೊಬ್ಬರದೇ. ನಮ್ಮ ಸಂಸ್ಕೃತಿಯ ನೆಲೆ - ಬೆಲೆಗಳನ್ನರಿಯದೆಯೇ - ಸುಸಂಪ್ರದಾಯದ ಸೂಕ್ಷ್ಮವನ್ನು ತಿಳಿಯದೆಯೇ ಎಲ್ಲವನ್ನೂ ಕುರುಡಾಗಿ ಹೊಗಳುವ ಅಥವಾ ತೆಗಳುವ ಯಾವುದೇ ಯತ್ನಕ್ಕೂ ರಾಯರದು ಸ್ಫೋಟಕಸದೃಶ ಪ್ರತಿಕ್ರಿಯೆ. ಈ ನಿರ್ಣಿಬಂಧ ಶಾರ್ದೂಲವಿಕ್ರೀಡಿತಕ್ಕೆ ಮುಖ್ಯಕಾರಣ ಅವರ ನಿರೀಹತೆಯೇ - 'ನಿರೀಹಾಣಾ ಈಶಃ ತೃಣಮಿವ ತಿರಸ್ಕಾರ ವಿಷಯಃ'

ರಾಯರ ಬರೆಹಗಳಾಗಲಿ, ಭಾಷಣಗಳಾಗಲಿ ವಿವಿಧವರ್ಣಶಬಲಿತ ಸುರಚಾಪದಂತೆ, ವಜ್ರದೀಪ್ತಿಯಂತೆ ಬಹುವಿಚಾರಸ್ಪೃಕ್ಕಾಗಿರುತ್ತವೆ. ಅನೇಕ ಅಚುಂಬಿತ ವಿಷಯಗಳ ಬೇರೆ ಬೇರೆ ಎಳೆಗಳನ್ನು ಭಾವ - ಬುದ್ಧಿಗಳ ಮಗ್ಗದ ಮೇಲೆ ನೇಯ್ದು ಕೌಶೇಯವಾಗಿರುತ್ತವೆ. ತಮ್ಮ ಬಾಳಿಗೊಂದು ಹಿರಿದಾದ ಗುರಿಯನ್ನು ಕಂಡುಕೊಂಡು ಅದರಂತೆ ಬಾಳುವಲ್ಲಿ ಅದೆಷ್ಟೊ ತೊಡಕು ತೊಂದರೆಗಳನ್ನು ಅನುಭವಿಸಿಯೂ ಅವಕ್ಕೆಲ್ಲ ಅಂಜದೆ, ಅಳುಕದೆ ಬಾಳುತ್ತಿರುವ, ಬೆಳಗುತ್ತಿರುವ ರಾಮಚಂದ್ರರಾಯರು ನಮ್ಮ ಕಾಲದ ಏಕವ್ಯಕ್ತಿ ವಿಶ್ವವಿದ್ಯಾಲಯವಾಗಿ ಅನ್ಯಾದೃಶರು.

ಕವಿವರೇಣ್ಯ ನೀಲಕಂಠದೀಕ್ಷಿತನು ತನ್ನ ಹಿರಿಯಜ್ಜ ಅಪ್ಪಯ್ಯ ದೀಕ್ಷಿತರ ಬಗೆಗೆ ಹೀಗೆನ್ನುತ್ತಾನೆ:

ಯಂ ವಿದ್ಮ ಇತಿ ಯದ್ಗ್ರಂಥಾನಭ್ಯಸ್ಯಾ ಮೋಽಖಿಲಾನಿತಿ ।
ಯಸ್ಯ ಶಿಷ್ಯಾಃ ಸ್ಮ ಇತಿ ಚ ವಿಕತ್ಥಂತಿ ವಿಪಶ್ಚಿತಃ

''ನಾವು ಅವರ ಬಗೆಗೆ ಕೇಳಿ ಬಲ್ಲೆವು, ನಾವು ಅವರ ಕೃತಿಗಳನ್ನೆಲ್ಲ ವ್ಯಾಸಂಗ ಮಾಡಿದ್ದೇವೆ, ನಾವು ಅವರಲ್ಲಿ ಪಾಠವನ್ನೇ ಕಲಿತಿದ್ದೇವೆ - ಎಂದು ವಿದ್ವಾಂಸರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.''

ಈ ಮಾತಿಗೆ ಆಚಾರ್ಯ ರಾಮಚಂದ್ರರಾಯರೂ ಹೊರತಲ್ಲ. ಇವರ ಪ್ರೀತಿಗೆ ನಾವೆಲ್ಲ ಸದಾ ದಕ್ಕುವಂತಾಗಲಿ ವೈಯಕ್ತಿಕವಾಗಿ ಅವರಿಗೆ ಈ ಮೂಲಕ ನಾನು ನನ್ನೊಂದು ನಮನವನ್ನು ಸಲ್ಲಿಸುವ ಅವಕಾಶದೊರೆತದ್ದು ಅನಂತವಾಗಲಿ.

॥ ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ ॥

Regn. No. 040155/83
Regn. No. TECH/47-202/MBI-2002
Date of Posting : 10-10-2003

## ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಗಣೇಶೋತ್ಸವ

ವಡಾಲದ ರಾಷ್ಟ್ರೀಯ ಕನ್ನಡ ಶಿಕ್ಷಣ ಸಂಸ್ಥೆಯವರು ನಡೆಸಿಕೊಂಡು ಬರುತ್ತಿರುವ (ಪ್ರಾಯೋಜಕತೆಯಲ್ಲಿರುವ) ವಡಾಲದ 'ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಶಾಲಾ ಕಾರ್ಯಕಾರಿ ಸಮಿತಿಯ ಸದಸ್ಯರೂ, ಶಾಲಾ ಶಿಕ್ಷಕ - ಶಿಕ್ಷಕೇತರ ವರ್ಗ ಹಾಗೂ ವಿದ್ಯಾರ್ಥಿಗಳ ತನು, ಮನ, ಧನದ ಸಹಾಯ, ಸಹಕಾರದಿಂದ ಶ್ರದ್ಧಾ ಭಕ್ತಿ ಪೂರ್ವಕವಾಗಿ 7 ದಿನಗಳ ಗಣಪತಿ ಆರಾಧನೆಯು ಜರುಗಿತು.

ಶಾಲಾ ಚಿತ್ರಕಲಾ ಶಿಕ್ಷಕರಾದ ಶ್ರೀ ಪ್ರಕಾಶ್ ಯು. ಪೈಂಟರ್ ಹಾಗೂ ಶ್ರೀ ಶಂಕರ ಗಾವಡೆಯವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ನಿರುಪಯುಕ್ತ ಪದಾರ್ಥಗಳಿಂದ (ಹಾಳಾದ ಬಿದಿರಿನ ಹೂವಿನ ಬುಟ್ಟಿ, ಗೋಣಿ ಚೀಲ ಹಾಗೂ ಹಳೆಯ ಪೇಪರ್ (ರದ್ದಿ) ಇವುಗಳನ್ನು ಮೈದಾ ಹಿಟ್ಟಿನಲ್ಲಿ ಮಿಶ್ರ ಮಾಡಿ) ತಯಾರಿಸಿದ ವಿದ್ಯಾರ್ಥಿಗಳಿಗೆ ಅಗತ್ಯವಿರುವ ನೈತಿಕ (ನೀತಿ) ಶಿಕ್ಷಣದ ಮೌಲ್ಯಗಳಾದ ಸಮಯ ಪ್ರಜ್ಞೆ (ಸಮಯ ಸಂಗೋಪನೆ) Panctuality (Time Management) ಶ್ರಮದ ಮೌಲ್ಯ (Dignity of Labour) ತೀಕ್ಷ್ಣತೆ (Sensitivity), ವೈಜ್ಞಾನಿಕ ದೃಷ್ಟಿಕೋನ (Scientici attitude) ಆದರ್ಶತೆ (ಮಾದರಿಯತೆ) (Modesty) ಧರ್ಮ ನಿರಪೇಕ್ಷತೆ (ಸಹಿಷ್ಣುತೆ) (Religious ...... ) ರಾಷ್ಟ್ರೀಯ ಏಕಾತ್ಮತೆ (National integration) ಲಿಂಗ ಸಮಾನತೆ (equality of gender) ವ್ಯವಸ್ಥಿತತೆ (orderliness (Neatness) ದೇಶಭಕ್ತಿ (ರಾಷ್ಟ್ರ ಭಕ್ತಿ ) (Patriotism) ಗಳನ್ನು ಸಾರುವ ಮೌಲ್ಯಗಳನ್ನು ಮರದ ಮಾದರಿಯಲ್ಲಿ ನಿರ್ಮಿಸಿದ ಪಾರ್ಶ್ವ ಭಾಗದಲ್ಲಿ ಗಣೇಶನ ಆರಾಧನೆಯು ಜರಗಿತು.

7 ದಿನಗಳ ಗಣಪತಿ ಆರಾಧನೆಯು ದಿನಂಪ್ರತಿ ಬೆಳಿಗ್ಗೆ ಮತ್ತು ಸಂಜೆ ಭಜನೆ, ಆರತಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿ ಆಗಸ್ಟ್ 6ರಂದು ದಾದರ್ ಶಿವಾಜಿ ಪಾರ್ಕಿನಲ್ಲಿ ವಿಸರ್ಜನೆಯು ನಡೆಯಿತು.

## ಶಿಕ್ಷಣ ತಜ್ಞೆ, ಕೊಡುಗೈ ದಾನಿ ಶ್ರೀಮತಿ ಪಾರ್ವತಿ ದೇಶಪಾಂಡೆಯವರ 75ನೇ ಜನ್ಮ ದಿನಾಚರಣೆ

ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಶಾಲಾ ಮಾಜಿ ಪರಿವೀಕ್ಷಕಿ ಖ್ಯಾತ ಶಿಕ್ಷಣ ತಜ್ಞೆ ಕೊಡುಗೈ ದಾನಿಯಾದ ಶ್ರೀಮತಿ ಪಾರ್ವತಿ ದೇಶಪಾಂಡೆಯರ 75ನೇ ಜನ್ಮ ದಿನವನ್ನು ಶಾಲಾ ಮಾಜಿ ಹಾಗೂ ಹಾಲಿ ಶಿಕ್ಷಕ, ಶಿಕ್ಷಕೇತರ ವರ್ಗ ಹಾಗೂ ಶಾಲಾ ಕಾರ್ಯಕಾರಿ ಸಮಿತಿಯ ಉಪಸ್ಥಿತಿಯಲ್ಲಿ ಆಗಸ್ಟ್ 23 ಗುರುವಾರದಂದು ಅದ್ದೂರಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಕಾರ್ಯಕಾರಿ ಸಮಿತಿಯ ಪರವಾಗಿ ಶುಭ, ಲಾಭ ವಿದ್ಯೆ, ಸ್ವಾತಂತ್ರ್ಯ, ಸಿದ್ಧಿ ಮತ್ತು ಸಾಧನೆಗಳ ಪ್ರತೀಕವಾದ ಲಕ್ಷ್ಮೀ, ಸರಸ್ವತಿ ಹಾಗೂ ಗಣಪತಿಯ ಬೆಳ್ಳಿಯ ಮೂರ್ತಿಗಳೊಂದಿಗೆ ಶಾಲು ಹೊದೆಸಿ ಫಲಪುಷ್ಪಗಳನ್ನಿತ್ತು ಶ್ರೀಮತಿ ಪಾರ್ವತಿ ದೇಶಪಾಂಡೆಯವರನ್ನು ಸತ್ಕರಿಸಲಾಯಿತು.

# ಸುತ್ತಮುತ್ತ

ಶ್ರೀಮತಿ ಪಾರ್ವತಿ ದೇಶಪಾಂಡೆಯವರು ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ ತನ್ನ ಗತಕಾಲದ ನೆನಪನ್ನು ಮೆಲುಕು ಹಾಕುತ್ತಾ ತಾನು ಚಿಕ್ಕಂದಿನಲ್ಲಿ ಅನುಭವಿಸಿದ ಕಷ್ಟಗಳು, ಸಹಾಯ ಮಾಡಿದ ಶಿಕ್ಷಕರು,ಸಹದ್ಯೋಗಿಗಳು, ಹಾಗೂ ಮಿತ್ರರು ನೀಡಿದ ಸಹಕಾರಕ್ಕೆ ಕೃತಜ್ಞತೆಯನ್ನು ಸಲ್ಲಿಸುತ್ತಾ ಎಣಿಸದೇ ಬಂದ ಈ ಅಭಿಮಾನದ ಸನ್ಮಾನಕ್ಕೆ ಆಭಾರಿಯಾಗಿದ್ದೇನೆ ಎಂದು ತಿಳಿಸಿದರು.

ಈ ಕಾರ್ಯಕ್ರಮಕ್ಕೆ ಶಾಲಾ ಕಾರ್ಯಕಾರಿ ಸಮಿತಿಯ ಸದಸ್ಯರು, ಶಾಲಾ ಮಾಜಿ ಹಾಗೂ ಹಾಲಿ ಶಿಕ್ಷಕ - ಶಿಕ್ಷಕೇತರ ವರ್ಗದವರೂ ಅವರ ಹಿತೈಷಿಗಳೂ ಅಭಿಮಾನಿಗಳೆಲ್ಲರೂ ಪಾಲ್ಗೊಂಡು ಜನ್ಮ ದಿನಾಚರಣೆಯು ಅದ್ದೂರಿಯಿಂದ ಹಾಗೂ ಸಂಭ್ರಮದಿಂದ ಆಚರಿಸಲು ಕಾರಣರಾದರು.

## 'ಸಿದ್ಧರಾಮ ಸೊನ್ನಲಿಗೆ' ಕೃತಿ ಬಿಡುಗಡೆ

ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ವಿರಚಿತ 'ಸಿದ್ಧರಾಮನ ಸೊನ್ನಲಿಗೆ ಸಾಂಸ್ಕೃತಿಕ ಅಧ್ಯಯನ' ಎಂಬ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಹರಿಕೃಷ್ಣ ಪುನರೂರು ಅವರು ಬಿಡುಗಡೆಗೊಳಿಸಿದರು.

ಸಾಹಿತ್ಯ ಬಳಗ ಆಯೋಜಿಸಿದ್ದ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಮಾವೇಶದಲ್ಲಿ ಪುನರೂರು ಅವರು ಮಾತನಾಡುತ್ತಾ 'ಸಂಶೋಧನೆ ಕಷ್ಟದ ಕೆಲಸ. ಅದು ಹೆಚ್ಚು ಶ್ರಮ ನಿರೀಕ್ಷಿಸುತ್ತದೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ರೂಪಿಸುವಲ್ಲಿ ಇಂದಿನ ಸೊಲ್ಲಾಪುರ (ಸೊನ್ನಲಿಗೆ) ಮಹತ್ವದ ಪಾತ್ರವಹಿಸಿದ್ದೆ. ಸಿದ್ಧರಾಮನ ಚಾರಿತ್ರಿಕ ಮುಖಗಳತ್ತ ಬೆಳಕು ಬೀರುವ ಈ ಕೃತಿ ಮಹತ್ವದ ಸಂಶೋಧನ ಕೃತಿ ಎಂದವರು ನುಡಿದರು.

ಶ್ರೀಮತಿ ಅಹಲ್ಯಾ ಬಲ್ಲಾಳ ಅವರು ಸಿದ್ಧರಾಮನ ಸಾಂಸ್ಕೃತಿಕ ಸಾಧನೆಗಳನ್ನು ತಿಳಿಯ ಪಡಿಸುವ ಈ ಕೃತಿ ವಿದ್ವಾಂಸರಿಗೂ ಜನಸಾಮಾನ್ಯರಿಗೂ ಪ್ರಯೋಜನಕಾರಿ ಎಂದು ನುಡಿದರು. ಈ ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ವಿವೇಕ ಶೆಟ್ಟಿ, ಜಯಸುವರ್ಣ, ಎಚ್‌ಬಿಎಲ್. ರಾವ್ ಮೊದಲಾದವರು ಉಪಸ್ಥಿತರಿದ್ದರು. ಪ್ರಕಾಶ್ ಶೆಟ್ಟಿ ಪೇಟಿಮನೆ ಅವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಗಾನಯೋಗಿ ಪಂ. ಮಲ್ಲಿಕಾರ್ಜುನ ಮನ್ಸೂರರ ಸ್ಮರಣೆ

ಕರ್ನಾಟಕ ಸಂಘದ 'ಕಲಾಭಾರತಿ' ಕಾರ್ಯಕ್ರಮದಲ್ಲಿ ಪಂ. ಮಲ್ಲಿಕಾರ್ಜುನ ಮನ್ಸೂರರ ೧೧ನೇ ಪುಣ್ಯ ತಿಥಿಯನ್ನು ದಿನಾಂಕ ೧೪.೯.೦೩ರಂದು ಭಕ್ತಿಯಿಂದ ಆಚರಿಸಲಾಯ್ತು. ಖ್ಯಾತ ಗಾಯಕ ಡಾ. ಅರುಣ ದ್ರಾವಿಡ ಈ ಕಾರ್ಯಕ್ರಮದ ಸಲುವಾಗಿ ಅಮೇರಿಕದಿಂದ ಇಲ್ಲಿ ಬಂದು ಹಾಡಿದ್ದು, ಒಂದು ವಿಶೇಷ ಸಂಗತಿ.

ಖ್ಯಾತ ಕ್ರಿಕೆಟ್ ಪಟು ರಾಹುಲ ದ್ರಾವಿಡ ಎಲ್ಲರಿಗೂ ಗೊತ್ತು. ಅವರ ಚಿಕ್ಕಪ್ಪ ಎಂದರೆ ಅರುಣ ದ್ರಾವಿಡ. ಚಿಕ್ಕಂದಿನಲ್ಲಿಯೇ ಸಂಗೀತದಲ್ಲಿ ಪ್ರಾವೀಣ್ಯ ಪಡೆದವರು. ಗಾನ ತಪಸ್ವಿನಿ- ಮೋಗೂಬಾಯಿ ಕುರ್ಡಿಕರ ಹಾಗೂ ಪಂ. ಕಿಶೋರಿ ಅಮೋಣ್ ಕರ್ ಅವರಿಂದ ೧೦ ವರ್ಷ ದೀರ್ಘ ಶಿಕ್ಷಣ ಪಡೆದ ಅರುಣ ದ್ರಾವಿಡರವರು ವ್ಯವಸಾಯದಿಂದ ಕೆಮಿಕಲ್ ಇಂಜನಿಯರ್, ವಿಶ್ವವಿಖ್ಯಾತ Jacob company ಯಲ್ಲಿ ಇವರ ಸ್ಥಾನ Chief Executive officer at pasedena USA.. ಆದರೂ ಅವರ ಸಂಗೀತದ ಅಭ್ಯಾಸವೂ ಉಚ್ಚಮಟ್ಟದ್ದು. ಈ ದಿನ ಅವರು ಮನ್ಸೂರರಿಗೆ ಪ್ರಿಯವಾದ ಹುಸೈನಿ ತೋಡಿ, ಸುಖಿಯಾ ಬಿಲಾವಲಯ್ ದೇಶಗಾನ ಹಾಡಿದರು. ಶುದ್ಧ ಸಾರಂಗದ ತರಾಣದಿಂದ ಅವರ ಅತ್ಯಂತ ಮಧುರವಾದ ಸಂಗೀತ ಕಛೇರಿ ಮುಕ್ತಾಯವಾಯ್ತು. ಪಕ್ಕವಾದನದ ಹೊಣೆ ಕನ್ನಡಿಗರಾದ ಸುಧೀರ ನಾಯಕ (ಹಾರ್ಮೋನಿಯಂ) ಹಾಗೂ ತಬಲಾ ಸಮಯ ಚೋಳ್‌ಕರ್ ಸಮಯೋಚಿತವಾಗಿ ಬಾರಿಸಿದರು.

ನಿರ್ವಹಣೆಯನ್ನು ಕಲಾಭಾರತಿಯ ಸಂಚಾಲಕರಾದ ಪ್ರಕಾಶ ಬುರ್ಡೆ ವಹಿಸಿದ್ದರು. ಇದು ಕಲಾಭಾರತಿಯ ೫೫೧ನೇಯ ಕಾರ್ಯಕ್ರಮ.

## ಡಾ| ಸಂಜೀವ ಶೆಟ್ಟಿಯವರಿಗೆ ಶ್ರೇಷ್ಠ ಶಿಕ್ಷಕ ಪ್ರಶಸ್ತಿ



ಶ್ರೇಷ್ಠ ಶಿಕ್ಷಕ ಪ್ರಶಸ್ತಿ ವಿಜೇತ, ಕೆ.ಜೆ. ಸೋಮೈಯಾ ಕಾಲೇಜ್ ಆಫ್ ಆರ್ಟ್ಸ್ ಎಂಡ್ ಕಾಮರ್ಸ್‌ನ ಕನ್ನಡ ವಿಭಾಗದ ಮುಖ್ಯಸ್ಥ, ಶಿಕ್ಷಣ ತಜ್ಞ, ಖ್ಯಾತ ಕವಿ ಡಾ. ಸಂಜೀವ ಶೆಟ್ಟಿಯವರಿಗೆ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಲಭಿಸಿದೆ. ಸೋಮಯ್ಯಾ ವಿದ್ಯಾವಿಹಾರ ಸಂಸ್ಥೆಯು ಮೊತ್ತ ಮೊದಲಬಾರಿಗೆ ಕೊಡಮಾಡಿದ ಶ್ರೇಷ್ಠ ಶಿಕ್ಷಕ ಪ್ರಶಸ್ತಿಗೆ ಡಾ. ಸಂಜೀವ ಶೆಟ್ಟಿ ಅವರನ್ನು ಆಯ್ಕೆ ಮಾಡಿದ್ದು, ಸೋಮೈಯಾ ಕಾಲೇಜಿನ ಪ್ರಾಧ್ಯಾಪಕರಲ್ಲಿ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪಡೆದವರಲ್ಲಿ ಮೊದಲಿಗರು, ಸರ್ವ ಪ್ರಥಮ ಕನ್ನಡಿಗರೂ ಆಗಿದ್ದಾರೆಂಬುದು ಉಲ್ಲೇಖನೀಯವಾಗಿದೆ. ಈ ಪ್ರಶಸ್ತಿಯು ಡಾ. ಶೆಟ್ಟಿ ಅವರ ಪ್ರಾಮಾಣಿಕ ಸಾರ್ಥಕ ಸೇವೆಗೆ ಸಂದ ಗೌರವವಾಗಿದೆ.

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938